ಹಳ್ಳಿ ಎಂಬಲ್ಲಿ ೨ ಆಸ್ಪತ್ರೆಗಳು ಇದ್ದು, ಅಲ್ಲಿ ೧ ವರ್ಷ ೨ ತಿಂಗಳಿಂದ ಡಾಕ್ಟರುಗಳು ಇಲ್ಲ. ಅಲ್ಲಿ ಒಂದೂ ವರೆ ವರ್ಷಗಳಿಂದಲೂ ಡಾಕ್ಟರುಗಳು ಇಲ್ಲದೇ ಇರುವುದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈ ಹಿಂದುಳಿದಿರತಕ್ಕ ಪ್ರದೇಶದಲ್ಲಿ ಡಾಕ್ಟರುಗಳು ಇಲ್ಲದೇ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು.—ತಾವು ಕ್ಷ-ಕಿರಣ ಉಪಕರಣದ ಬಗ್ಗೆ ಪ್ರಶ್ನೆ ಕೇಳಿದ್ದೀರಿ. ಡಾಕ್ಟರುಗಳು ಇಲ್ಲದೇ ಇರುವ ವಿಷಯ ಇದಕ್ಕೆ ಸಂಬಂಧ ಪಟ್ಟುದಲ್ಲ.

ಶ್ರೀ ವಿ. ಮುನಿಯಪ್ಪ.—ಈ ಬಗ್ಗೆಯೂ ನಾನು ಪ್ರಶ್ನೆ ಕೇಳಿದ್ದು ಅದಕ್ಕೆ ಲಿಖಿತ ಮೂಲಕ ಉತ್ತರ ಬಂದಿದೆ. ಅದು ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಬರಬೇಕೆಂದು ನಾನಂ ಕಳಿಸಿದ್ದೆ. ಆದ್ದರಿಂದ ಆ ಬಗ್ಗೆ ನಾನು ಈ ಅವಕಾಶ ಉಪಯೋಗಿಸಿಕೊಂಡು ಪ್ರಶ್ನೆ ಕೇಳುತ್ತಿದ್ದೇನೆ. ಈ ಬಗ್ಗೆ ಉತ್ತರ ಬೇಕಾಗಿದೆ.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿದ್ದೀರಿ. ಯಾವುದು ಲಿಖಿತ ಮೂಲಕ ಬರಬೇಕೋ ಅದು ಲಿಖಿತ ಮೂಲಕ ಹಾಗೂ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳಲ್ಲಿ ಯಾವುದು ಬರಬೇಕೋ ಅದು ಅದರಲ್ಲಿ ಬರುತ್ತದೆ. ಒಂದೇ ದಿನ ಎರಡೂ ಪ್ರಶ್ನೆಗಳು ಸದನದಲ್ಲಿ ಉತ್ತರಿಸಬೇಕೆಂದರೆ ಹೇಗೆ ?

ಶ್ರೀ ವಿ. ಮುನಿಯಪ್ಪ.—ಸಾರ್ವಜನಿಕರ ಹಿತದೃಷ್ಟಿ ಅಡಗಿರುವುದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಎಲ್ಲ ಪ್ರಶ್ನೆಗಳೂ ಸಾರ್ವಜನಿಕ ಹಿತದೃಷ್ಟಿಯಿಂದಲೇ ಕೂಡಿರುತ್ತವೆ.

ಶ್ರೀ ವಿ. ಧನಂಜಯ ಕುಮಾರ್.—ಕಳೆದ ಒಂದೂವರೆ ವರ್ಷದಿಂದ ಅಲ್ಲಿ ಡಾಕ್ಟರು ಇಲ್ಲ ಎಂದು ಹೇಳುತ್ತಿದ್ದಾರೆ. ಅಲ್ಲಿ ಸಾರ್ವಜನಿಕರ ಹಿತದೃಷ್ಟಿ ಅಡಗಿರುವುದರಿಂದ ಈ ಬಗ್ಗೆ ಸರ್ಕಾರದಿಂದ ಅವರು ಉತ್ತರವನ್ನು ಬಯಸುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು.—ಪ್ರಶ್ನೆ ಕೇಳುವ ಸದಸ್ಯರಿಗೆ ಅಲ್ಲಿಯ ವಿಷಯ ಗೊತ್ತಿದೆ. ಈ ಬಗ್ಗೆ ಉತ್ತರ ಕೊಡುವುದಿದ್ದರೆ ಸರ್ಕಾರ ಕೊಡುತ್ತದೆ. ನೀವು ಏಕೆ ಮಧ್ಯ ಪ್ರವೇಶ ಮಾಡುತ್ತೀರಿ ?

ನರಸಿಂಹರಾಜಪುರ ತಾಲೂಕಿನ ಬಾಳೆಹೊನ್ನೂರಿನಲ್ಲಿರುವ ಔಟ್ ಪೋಸ್ಟ್ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವುದು.

೧೨೭೩. ಶ್ರೀ ಹೆಚ್. ಜಿ. ಗೋವಿಂದಗೌಡ (ಶೃಂಗೇರಿ) .—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಒಳಾಡಳಿತ ಹಾಗೂ ರಾಷ್ಟ್ರೀಯ ಉಳಿತಾಯ ಯೋಜನಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರದ ಬಾಳೆಹೊನ್ನೂರಿನಲ್ಲಿರುವ ಪೋಲೀಸ್ ಔಟ್ ಪೋಸ್ಟ್ ಅನ್ನು ಮೇಲ್ದರ್ಜೆಗೆ ಏರಿಸುವ ವಿಚಾರದಲ್ಲಿ ಸರ್ಕಾರದವರು ಕೈ ಕೊಂಡಿರುವ ಕ್ರಮವೇನು ?

ಶ್ರೀ ರಮೇಶ್ ಜಿಗಜಿಣಗಿ.—ಬಾಳೆಹೊನ್ನೂರಿನ ಆರಕ್ಷಕ ಉಪ ಠಾಣೆಯನ್ನು ಮೇಲ್ದರ್ಜೆಗೆ ಮಾರ್ಪಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಜಿ ಗೋವಿಂದಗೌಡ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಬಾಳೆಹೊನ್ನೂರಿನ ಆರಕ್ಷಕ ಉಪ ಠಾಣೆಯನ್ನು ಮೇಲ್ದರ್ಜೆಗೆ ಮಾರ್ಪಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಇದನ್ನು ಎಷ್ಟು ದಿವಸದಲ್ಲಿ ಕಾರ್ಯಗತ ಮಾಡುತ್ತಾರೆಂದು ಅವರು ತಿಳಿಸುತ್ತಾರೆಯೇ ?

ಶ್ರೀ ರಮೇಶ್ ಜಿಗಜಿಣಗಿ.—ಈ ಬಗ್ಗೆ ನಿರ್ದಿಷ್ಟವಾದ ವೇಳೆಯನ್ನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡು ಆ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಕೃಷ್ಣರಾಜಸಾಗರದಲ್ಲಿ ಮೀನುಗಾರಿಕೆ ಯೋಜನೆಯನ್ನು ಕೈಗೊಳ್ಳುವ ಬಗ್ಗೆ.

೧೪೭೪. ಶ್ರೀ ಎಸ್. ಸಂಜಪ್ಪ (ಕೃಷ್ಣರಾಜನಗರ) .—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮೀನುಗಾರಿಕೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?